ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 4, Jan-Feb 2022, Pp.53-60.**
**©*IIMRD*, Mysuru**

IIMRD JOURNALS

**www.iimrd.com**

# ಹೆಗ್ಗಡದೇವನಕೋಟೆ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು

**ಸಿದ್ದಯ್ಯ.[1] ಮತ್ತು ಡಾ. ಶ್ರೀನಿವಾಸ. ವಿ[2]**

[1]ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿ.ವಿ., ಮಂಗಳಗಂಗೋತ್ರಿ, ಮಂಗಳೂರು.
[2]ಐ.ಸಿ.ಎಸ್.ಎಸ್.ಆರ್. ಪೋಸ್ಟ್ ಡಾಕ್ಟರಲ್ ಫೆಲೋ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿ.ವಿ. ಮೈಸೂರು.

## ಸಾರಾಂಶ (Abstract)

*ಹೆಗ್ಗಡದೇವನಕೋಟೆ ಪ್ರದೇಶವು ನೈಸರ್ಗಿಕವಾಗಿ, ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿವೂ ಸಹ ಪ್ರಾಮುಖ್ಯತೆಯನ್ನು ಪಡೆದಿದೆ. ಕಪಿಲಾ, ತಾರಕ, ನುಗು, ಹೆಬ್ಬಾಳು ನದಿಗಳ ಜಲಾನಯನ ಪ್ರದೇಶಗಳನ್ನೊಳಗೊಂಡು ಅತ್ಯಂತ ವಿಸ್ತಾರವಾಗಿದೆ. ಹೆಗ್ಗಡದೇವನಕೋಟೆ ಎಂಬ ಹೆಸರು ಈ ಪ್ರದೇಶಕ್ಕೆ ಹೊಯ್ಸಳ ದಂಡನಾಯಕ ಹೆಗ್ಗಡದೇವನಿಂದ ಬಂದಿದೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶವನ್ನು "ಪುನ್ನಾಟ ಪ್ರದೇಶ" ಎಂದು ಅನಂತರ "ನುಗುನಾಡು" ಎಂದು ಕರೆಯಲಾಗುತ್ತಿತ್ತು. ಪುನ್ನಾಟದ ಅರಸರು, ಗಂಗರಸರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಹಾಗು ಮೈಸೂರು ಅರಸರ ಕಾಲಕ್ಕೆ ಸೇರಿದ ಶಾಸನಗಳು, ದೇವಾಲಯಗಳು ಹಾಗೂ ಸ್ಥಳೀಯ ವೀರಗಲ್ಲು – ಮಾಸ್ತಿಕಲ್ಲುಗಳು ಈ ಪ್ರದೇಶದ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ. ಯಾವುದೇ ಒಂದು ಪ್ರದೇಶದ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಬೇಕಾದರೆ ಅಲ್ಲಿನ ಭೌಗೋಳಿಕ ಪ್ರದೇಶ ಮತ್ತು ಸಾಂಸ್ಕೃತಿಕ ಲಕ್ಷಣಗಳು ಪ್ರಮುಖ ಆಧಾರವಾಗಿ ಕಂಡುಬರುತ್ತವೆ. ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದ ಸಾಂಸ್ಕೃತಿಕ ನೆಲೆಗಳ ಕುರಿತು ಪರಿಶೀಲಿಸಲಾಗಿದೆ.*

**ಮುಖ್ಯಪದಗಳು (Keywords):** *ಹೆಗ್ಗಡದೇವನಕೋಟೆ, ಸಾಂಸ್ಕೃತಿಕ ನೆಲೆಗಳು, ಶಾಸನಗಳು, ಅರಸರು, ದೇವಾಲಯಗಳು, ಜೀರ್ಣೋದ್ದಾರ, ಕಳ್ಳಂಬಾಳು, ಕ್ಯಾತನಹಳ್ಳಿ, ಶಾಸನಗಳು, ಅರಸರು.*

### ಪೀಠಿಕೆ

ಕರ್ನಾಟಕದ ವನಸಿರಿ ನಾಡು ಎಂದೇ ಖ್ಯಾತಿ ಪಡೆದಿರುವ ಹೆಗ್ಗಡದೇವನಕೋಟೆ ಪ್ರದೇಶದ ಸಾಂಸ್ಕೃತಿಕ ಪರಂಪರೆಯು ಪ್ರಾಚೀನವೂ, ಶ್ರೀಮಂತವೂ ಆಗಿದೆ. ಈ ಪ್ರದೇಶವು ನೈಸರ್ಗಿಕವಾಗಿ, ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿವೂ ಸಹ ಪ್ರಾಮುಖ್ಯತೆಯನ್ನು ಪಡೆದಿದೆ. ಕಪಿಲಾ, ತಾರಕ, ನುಗು, ಹೆಬ್ಬಾಳು ನದಿಗಳ ಜಲಾನಯನ ಪ್ರದೇಶಗಳನ್ನೊಳಗೊಂಡು ಅತ್ಯಂತ ವಿಸ್ತಾರವಾಗಿದೆ. ಈ ನದಿಗಳ ನಡುವೆ ಪೂರ್ವಘಟ್ಟಗಳು ಮತ್ತು ಪಶ್ಚಿಮಘಟ್ಟಗಳನ್ನು ಸಂಧಿಸುವ ಚಿಕ್ಕದೇವಮ್ಮನಬೆಟ್ಟ, ಮಾದಪುರದಬೆಟ್ಟ,

*Please cite this article as: ಸಿದ್ದಯ್ಯ ಮತ್ತು ಡಾ. ಶ್ರೀನಿವಾಸ. ವಿ. (2022). ಹೆಗ್ಗಡದೇವನಕೋಟೆ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.53–60.*

ಬಸಪುರಬೆಟ್ಟ, ಮುಳ್ಳೂರು ಬೆಟ್ಟ, ಗೋಪಾಲಸ್ವಾಮಿ ಬೆಟ್ಟ ಒಳಗೊಂಡಂತೆ ಪಲವತ್ತದ ಮೈದಾನ ಪ್ರದೇಶದಿಂದ ಕೂಡಿದೆ. ಅಲ್ಲದೆ ಸಸ್ಯ ಸಂಪನ್ಮೂಲಕ್ಕೆ ಹೆಸರುವಾಸಿಯಾಗಿದೆ.

ಹೆಗ್ಗಡದೇವನಕೋಟೆ ಎಂಬ ಹೆಸರು ಈ ಪ್ರದೇಶಕ್ಕೆ ಹೊಯ್ಸಳ ದಂಡನಾಯಕ ಹೆಗ್ಗಡದೇವನಿಂದ ಬಂದಿದೆ. ಇದಕ್ಕೆ ಪೂರಕವಾಗಿ ಕ್ರಿ.ಶ.1327ರ ಬಪ್ಪನಹಳ್ಳಿಯ ಶಾಸನದಲ್ಲಿ ಹೆಗ್ಗಡದೇವ ಎಂಬುವವನ ಹೆಸರುನ್ನು ಉಲ್ಲೇಖಿಸಲಾಗಿದೆ. ಅವನು ಊರಿನ ಸುತ್ತ ಕೋಟೆಯನ್ನು ಕಟ್ಟಿಸಿ ಆಡಳಿತ ನಡೆಸುತ್ತಿದ್ದುದರಿಂದ ಈ ಊರಿಗೆ ಹೆಗ್ಗಡದೇವನಕೋಟೆ ಎಂದು ಹೆಸರಾಯಿತು ಎಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಅಲ್ಲಲ್ಲಿ ಕೋಟೆಯ ಕುರುಹುಗಳು ಕಾಣಸಿಗುತ್ತವೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶವನ್ನು "ಪುನ್ನಾಟ ಪ್ರದೇಶ" ಎಂದು ಅನಂತರ "ನುಗುನಾಡು" ಎಂದು ಕರೆಯಲಾಗುತ್ತಿತ್ತು. ಚಾರಿತ್ರಿಕ ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶಕ್ಕೆ ಸಂಬಂಧಿಸಿದಂತೆ ಅನೇಕ ಉಲ್ಲೇಖಗಳು ದೊರಕುತ್ತವೆ. ಈ ಪ್ರದೇಶದಲ್ಲಿ ಆಳಿದ ಪುನ್ನಾಟದ ಅರಸರು, ಗಂಗರಸರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಹಾಗು ಮೈಸೂರು ಅರಸರ ಕಾಲಕ್ಕೆ ಸೇರಿದ ಶಾಸನಗಳು, ದೇವಾಲಯಗಳು ಹಾಗೂ ಸ್ಥಳೀಯ ವೀರಗಲ್ಲು–ಮಾಸ್ತಿಕಲ್ಲುಗಳು ಈ ಪ್ರದೇಶದ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ.

ಯಾವುದೇ ಒಂದು ಪ್ರದೇಶದ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಬೇಕಾದರೆ ಅಲ್ಲಿನ ಭೌಗೋಳಿಕ ಪ್ರದೇಶ ಮತ್ತು ಸಾಂಸ್ಕೃತಿಕ ಲಕ್ಷಣಗಳು ಪ್ರಮುಖ ಆಧಾರವಾಗಿ ಕಂಡುಬರುತ್ತವೆ. ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದ ಸಾಂಸ್ಕೃತಿಕ ನೆಲೆಗಳ ಕುರಿತು ಪರಿಶೀಲಿಸಲಾಗಿದೆ.

**ಕಟ್ವೆಮನುಗನಹಳ್ಳಿ**

ಹೆಗ್ಗಡದೇವನಕೋಟೆಯಿಂದ 15.ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳ ಕಟ್ವೆಮನುಗನಗಳ್ಳಿ. ಭೌಗೋಳಿಕವಾಗಿ ಈ ಗ್ರಾಮವು ತಾರಕ ನದಿಯ ಎಡದಂಡೆಯ ಮೇಲಿದೆ ಹಾಗೂ ಆಳ್ತಲ್‌ಹುಂಡಿ, ಪೆಂಜಳ್ಳಿ, ಮೊತ್ತ, ಮಾಚನಾಯಕನಹಳ್ಳಿ, ಅಂಕನಾಥಪುರ, ನಾಗನಹಳ್ಳಿ ಗ್ರಾಮಗಳು ಸುತ್ತುವರೆದಿವೆ. ಹೆಗ್ಗಡದೇವನಕೋಟೆ ಪ್ರದೇಶವನ್ನು ಆಳ್ವಿಕೆಗೆ ಒಳಪಡಿಸಿಕೊಂಡ ರಾಜಮನೆತನಗಳಾದ ಪುನ್ನಾಟ ರಾಜ್ಯದ ಅರಸರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಈ ಊರನ್ನು ಆಳ್ವಿಕೆ ಮಾಡಿರುವುದನ್ನು ಗಮನಿಸಬಹುದು. ಊರ ಬಸವನಗೂಡಿ ಮುಂದಿರುವ ಸುಮಾರು 9ನೆಯ ಶತಮಾನದ ಗಂಗರ ಶಾಸನದಲ್ಲಿ ನೀತಿಮಾರ್ಗ ಕೊಂಗುಣಿವರ್ಮಾನು ಆಳ್ವಿಕೆ ಮಾಡುತ್ತಿರುವಾಗ ಎರೆಯಪ್ಪರಸನು ನುಗು–ನವಲೆನಾಡನ್ನು ಆಳುತ್ತಿದ್ದಾಗ ಬಯಲುನಾಡ ಶತ್ರುಪಡೆ ಕೊತ್ತಮಂಗಲಕ್ಕೆ ಲಗ್ಗೆ ಇಟ್ಟು ಗೋವುಗಳನ್ನು ಅಪರಿಸಿದಾಗ ಪೆರ್ವಯಲ ಕೊಂಗುಣಿ ಅವರನ್ನು ಹಿಮ್ಮೆಟ್ಟಿಸಿ ಗೋವುಗಳನ್ನು ಸೆರೆಯಿಂದ ಬಿಡಿಸುವ ಸಂಧರ್ಭದಲ್ಲಿ ಹತನಾದ ಪೆರ್ಮಾಡಿಗೌಡನ ಮಗನಾದ ರಾಮನ ಸಲುವಾಗಿ ಪೇರ್ಮಾಡಿ ಗೌಡನಿಗೆ ನಾಡಗೌಡಿಕೆಯನ್ನು ನೀಡಿ ಕಿರುವೊಸೂರನ್ನು ಕಲ್ನಾಡಾಗಿ ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತದೆ. ಹೆ.ಕೋ.4. ಕಟ್ವೆಮನುಗನಹಳ್ಳಿ ಶಾಸನದಲ್ಲಿ ಮಣಿಗೆಹಳಿ ಎಂದು ಉಲ್ಲೇಖಿಸಲಾಗಿದೆ.

ಇದಕ್ಕೆ ಪೂರಕವಾಗಿ ಹೊಳೆ ದಾರಿಯಲ್ಲಿರುವ ಕ್ರಿ.ಶ.1264ರ ಶಾಸನವು ಪಾಂಡ್ಯ ದೇಶದ ಸ್ಥಾನಿಕ ನಾಗಿದೇವನು ನವಲೆನಾಡ ಮಣಿಗನಹಳ್ಳಿಯ ರಾಮನಾಥದೇವರಿಗೆ ಪೂಜಾವಿಧಿಗೆಂದು ಮಲ್ಲೆಯ ದಂಡನಾಯಕನ ಅಧಿಕಾರವಧಿಯಲ್ಲಿ ಕಲ್ಲುಗಾಣ ಮಾಡಿಸಿದ ವಿಷಯವನ್ನು ಕಟ್ಟೆಮನುಗನಹಳ್ಳಿ ಶಾಸನ ತಿಳಿಸುತ್ತದೆ. ಇದರಿಂದ ರಾಮೇಶ್ವರ ದೇವಾಲಯವಿರುವ ಅಂಶ ವೇದ್ಯವಾಗುತ್ತದೆ. ಈ ಗುಡಿ ಗಂಗರ ಕಾಲದ ಶಾಸನೋಕ್ತ ಯೋಧ ರಾಮನ ಸಲುವಾಗಿ ನಿರ್ಮಿಸಿರಬೇಕೆಂದು ತೋರುತ್ತದೆ. ಮತ್ತೊಂದು ದೇವಾಲಯವಾದ ಬಸವನಗುಡಿಯು ಪ್ರಾಚೀನ ದೇವಾಲಯವಾಗಿದೆ. ಬಸವೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ಜಾತ್ರೆ ಮಹೋತ್ಸವವನ್ನು ನಡೆಸಲಾಗುತ್ತದೆ. ಶಕ್ತಿ ದೇವತೆಗಳಾದ ಕಾಳಮ್ಮ ಮತ್ತು ಮಾರಮ್ಮ ದೇವಾಲಯಗಳಿವೆ. ಹೆ.ಕೋ.6ರ ಶಾಸನದಲ್ಲಿ ಮಾರಮ್ಮ ದೇವರಿಗೆ ಸುಬ್ಬಪ್ಪನವರ ಮಗ ಸುಬ್ಬಣರವರು ಗಂಟೆಯನ್ನು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಹೀಗೆ ಕಟ್ಟೆಮನುಗನಹಳ್ಳಿಯು ಪ್ರಾಚೀನ ಕಾಲದಿಂದಲೂ ಚಾರಿತ್ರಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದು.

**ಕಳ್ಳಂಬಾಳು**

ಕಳ್ಳಂಬಾಳು ಒಂದು ಐತಿಹಾಸಿಕ ಸ್ಥಳವಾಗಿದೆ. ಸರಗೂರಿನಿಂದ 20 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಭೌಗೋಳಿಕವಾಗಿ ನುಗು ನದಿಯ ಎಡದಂಡೆಯ ಮೇಲಿದೆ. ನಂಜನಗೂಡು ತಾಲ್ಲೂಕು ಮತ್ತು ಹೆಗ್ಗಡದೇವನಕೋಟೆ ಪ್ರದೇಶದ ಗಡಿ ಭಾಗವಾಗಿದೆ. ದಡದಹಳ್ಳಿ, ಕುಂದೂರು, ನಂಜಗೂಡು ತಾಲ್ಲೂಕಿನ ಜಾಲಹಳ್ಳಿ, ಚಾಮಲಪುರ, ಕಟ್ಟೆಹುಣಸೂರು, ನಂಜೀಪುರ ಗ್ರಾಮಗಳು ಸುತ್ತುವರೆದಿವೆ. ಪ್ರಾಚೀನ ಕಾಲದಿಂದಲೂ ಈ ಊರನ್ನು ಪುನ್ನಾಟ ಅರಸರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರಿನ ಒಡೆಯರು ಆಳ್ವಿಕೆ ಮಾಡಿರುವುದನ್ನು ಈ ಊರಿನಲ್ಲಿ ದೊರೆತಿರುವ ಶಾಸನಗಳು, ಸ್ಮಾರಕಗಳು, ಕ್ಷೇತ್ರಕಾರ್ಯದ ವರದಿಗಳಿಂದ ಪರಿಶೀಲಿಸಲಾಗಿದೆ. ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ವ್ಯಾಪಾರ ಕೇಂದ್ರವಾಗಿ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ತನ್ನದೇ ಆದ ಪ್ರಭಾವವನ್ನು ಮುಂದುವರೆಸಿಕೊಂಡು ಬಂದಿತ್ತು. ಇಲ್ಲಿಂದ ಈವರೆಗೆ ಒಂಬತ್ತು ಶಾಸನಗಳು ವರದಿಯಾಗಿವೆ. ಇಮ್ಮಡಿ ಹೊಯ್ಸಳ ಬಲ್ಲಾಳನ ಕ್ರಿ.ಶ.1211ರ ಶಾಸನವು ಈ ಊರನ್ನು ಕಲ್ಲಂಬಾಳು, ಕಲ್ಲಂಬಾರು ಎಂದು ಕರೆದಿದೆ. ಇಲ್ಲಿ ಕಾಮೇಶ್ವರ ದೇವಾಲಯವಿದೆ. ಅದರ ನವರಂಗದ ಕಂಬದ ಮೇಲೆ ತಮಿಳಿನಲ್ಲಿ ಬರೆದಿರುವ ಶಾಸನದಲ್ಲಿ ಕಳ್ಳಂಬಾಳು 'ಕಲ್ಲಮ್ಬಾರು' ನಗರ ಎಂದು ಕರೆಯಲಾಗಿದೆ. ಇದಕ್ಕೆ 'ಸಿಲೆಪುರ' ಎಂಬ ಪ್ರತಿನಾಮಧೇಯವೂ ಇದ್ದ ಅಂಶ ಕ್ರಿ.ಶ. 1738ರ ಶಾಸನದಿಂದ ಗೊತ್ತಾಗುತ್ತದೆ. ಚೋಳ–ಹೊಯ್ಸಳ ಶೈಲಿಯ ಕಾಮೇಶ್ವರ ದೇವಾಲಯವು ವಿಶಾಲವಾಗಿದ್ದು ಅದರ ಗರ್ಭಗೃಹಕ್ಕೆ ಇದ್ದ ಶಿಖರವಿಂದು ಕಣ್ಮರೆಯಾಗಿದೆ. ಶಾಸನಗಳಲ್ಲಿ ಕಲಿಯುಗ ಕಾಮೇಶ್ವರ ಎಂದೇ ಉಲ್ಲೇಖಿತಗೊಂಡಿರುವ ಈ ಗುಡಿಯ ಮುಂಭಾಗದಲ್ಲಿ ಅರ್ಧಮಟ್ಟಪವಿದೆ. ಚೋಳ ಶೈಲಿಯ ಕೊಳವೆಯಾಕಾರದ ಕಂಬಗಳು ನವರಂಗದಲ್ಲಿವೆ. ಇಮ್ಮಡಿ ಬಲ್ಲಾಳನು ನುಗುವಿನ ಉತ್ತರತೀರದ ಯಜ್ಞ ಕಾಮೇಶ್ವರ ದೇವರ ಸೇವೆಗೆಂದು ಕುಂದೂರನ್ನು ದತ್ತಿ ಬಿಟ್ಟಿದ್ದು ಕ್ರಿ.ಶ. 1211ರ ಶಾಸನದಿಂದ ತಿಳಿಯುತ್ತದೆ. ಅಲ್ಲೆ ಇರುವ ಕ್ರಿ.ಶ.1218ರ ಇನ್ನೊಂದು ಶಾಸನದಿಂದ

ರಾಣಿ ಕೇತಲಮಹಾದೇವಿ ಆಳುತ್ತಿದ್ದಾಗ, ಅದೇ ಕುಂದೂರು ಗ್ರಾಮವನ್ನು ಕುಮಾರ ಮಾಧವ ದಂಡನಾಯಕರು ಪುನರ್ಭರಣ ಮಾಡಿದ ಅಂಶ ಗೊತ್ತಾಗುತ್ತದೆ. ನೆರೆಯ ಕುಂದೂರಿನ ಕ್ರಿ.ಶ.1300ರ ಶಾಸನದಿಂದ ರಾಮೇಶ್ವರ ಗುಡಿಯ ತಿರುಮಲೋಕಮಂಟಪ ನಿರ್ಮಾಣಗೊಂಡ ಅಂಶ ವೇದ್ಯವಾಗುತ್ತದೆ. ನವರಂಗದ ಒಳಭಾಗದಲ್ಲಿ ಸಪ್ತಮಾತೃಕೆ, ಕಾರ್ತಿಕೇಯ, ಶಿವ, ವೀರಭದ್ರ, ಪಾರ್ವತಿ, ಬ್ರಹ್ಮ, ಸರಸ್ವತಿ ಉಮಾಮಹೇಶ್ವರ, ಮಹಿಷಾಸುರ ಮರ್ಧಿನಿ, ಸೂರ್ಯ, ಭೈರವ, ಚಾಮುಂಡಿ, ಮಹೇಶ್ವರಿ, ಮೊದಲಾದ ಮೂರ್ತಿಗಳಿವೆ. ಶಿಥಿಲವಾಗಿದ್ದ ಕಾಮೇಶ್ವರ ದೇವಾಲಯವನ್ನು ಕ್ರಿ.ಶ.1738ರಲ್ಲಿ ಕಲ್ಲಹಳ್ಳಿ ಕುಲದ ಕಪ್ಪಣಗೌಡನು ಅಷ್ಟಬಂಧನ ಪೂರಕವಾಗಿ ಜೀರ್ಣೋದ್ದಾರ ಮಾಡಿಸಿ ದೇವತಾಕಾರ್ಯಗಳನ್ನು ನಡೆಸಿಕೊಂಡು ಬಂದಿರುವುದಾಗಿ ತಿಳಿದುಬರುತ್ತದೆ. ಹುಣಸಲೇಶ್ವರ, ಮಾರಿಗುಡಿ, ಚಿಕ್ಕದೇವರು, ನಾರಾಯಣಸ್ವಾಮಿ, ಮಹದೇಶ್ವರ, ದೇವಾಲಯಗಳು ಕಳ್ಳಂಬಾಳುವಿನಲ್ಲಿರುವ ಇನ್ನುಳಿದ ದೇವಾಲಯಗಳಾಗಿವೆ.

ಕಳ್ಳಂಬಾಳು ನಗರವು ಮಧ್ಯಕಾಲೀನ ಯುಗದಲ್ಲಿ ಪ್ರಮುಖವಾದ ವ್ಯಾಪಾರ ಕೇಂದ್ರವಾಗಿತ್ತು. ಪ್ರಾಚೀನ ವರ್ತಕ ಸಮೂಹವನ್ನು ಗಮನಿಸಿದರೆ ಅವರನ್ನು ಜೈನ, ಶೈವ, ವೈಷ್ಣವ, ಮತ್ತು ಇತರರು ಎಂದು ವಿಭಾಗಿಸಬಹುದು. ವಾಣಿಜ್ಯ ವ್ಯವಹಾರದಿಂದ, ಸಂಘಟನೆಯಿಂದ ಮತ್ತು ಧರ್ಮಕಾರ್ಯಗಳಿಂದ ಪ್ರಭಾವಶಾಲಿಗಳಾಗಿ ಕಾರ್ಯನಿರ್ವಸಿದರು. ಹಲವಾರು ವರ್ತಕರು ಕೇವಲ ತಮ್ಮ ವೃತ್ತಿಯನ್ನುಷ್ಟೇ ಮಾಡದೆ ಆಡಳಿತದ ಹಿರಿಯ ಹೊಣೆಗಳನ್ನು ಹೊತ್ತಿದ್ದರು. (ಸಿ.ಯು.ಮಂಜುನಾಥ್) ಹೆ.ಕೋ.81 ನೇ ಶಾಸನದಲ್ಲಿ ಕಳ್ಳಂಬಾಳುನಗರದ ಮಂಡಲಸ್ವಾಮಿ ನಕರಂಗಳು ಕಾಮೇಶ್ವರ ದೇವರ ಅಂಗಭೋಗ ರಂಗಭೋಗಕ್ಕೆ ಭೂದಾನ ಮಾಡಿರುವುದನ್ನು ತಿಳಿಸುತ್ತದೆ. ಮಂಡಲ ಒಂದು ನಿರ್ದಿಷ್ಟ ವಿಸ್ತಾರವಾದ ಪ್ರಾಂತ್ಯವನ್ನು ಸೂಚಿಸುತ್ತದೆ ಈ ಶಾಸನದಲ್ಲಿ ಮಂಡಲಸ್ವಾಮಿಗಳ ಉಲ್ಲೇಖ ಕಂಡುಬರುವುದರಿಂದ ಕಳ್ಳಂಬಾಳು ನಗರವನ್ನು ಮಂಡಲೇಶ್ವರರು ಆಳ್ವಿಕೆ ಮಾಡುತ್ತಿದ್ದರು.

ಮಾನವ ಜನಾಂಗದ ಆರ್ಥಿಕ ಬದುಕನ್ನು ರೂಪಿಸಿದ ಹಲವಾರು ಅಂಶಗಳಲ್ಲಿ ಕೃಷಿ ಮತ್ತು ವ್ಯಾಪಾರ ಮುಖ್ಯವೆನಿಸಿವೆ. ಕಳ್ಳಂಬಾಳುವಿನಲ್ಲಿ ಆಳುವ ವರ್ಗದವರು ಕೃಷಿ ಮತ್ತು ವ್ಯಾಪಾರಕ್ಕೆ ಹೆಚ್ಚಿನ ಪ್ರೊತ್ಸಾಹವನ್ನು ನೀಡಿದ್ದರು. ಹೆ.ಕೋ.81 ರ ಕ್ರಿ.ಶ.1218ನೇ ಶತಮಾನದ ಕಳ್ಳಂಬಾಳು ಶಾಸನದಲ್ಲಿ ಕಲ್ಲಂಬಾಳ ಮಂಡಲಸ್ವಾಮಿ ನಖರಂಗಳು ಕೆಯಿ ಮತ್ತರೊಂದನ್ನು ನೀಡಿರುವ ಉಲ್ಲೇಖ ಕಂಡುಬರುತ್ತದೆ. ಕೆಯಿ ಮತ್ತರು ಎಂದರೆ ಬೆದ್ದಲು ಭೂಮಿ ಮತ್ತು ತೋಟಗಳನ್ನು ಅಳೆಯುತ್ತಿದ್ದ ಅಳತೆ ಮಾಪಕವಾಗಿದೆ ಎಂದು ಸಿ.ಯು. ಮಂಜುನಾಥ್ ರವರು ಮತ್ತು ವಿದ್ವಾಂಸರು ಅಬಿಪ್ರಾಯಪಟ್ಟಿದ್ದಾರೆ. ವೈದಿಕ, ಜೈನ, ಶೈವ, ಮತದ ಈ ವರ್ತಕರು ದೇವಾಲಯ–ಕಂಬ–ದೀಪಮಾಲೆ ಕಂಬ–ಮಠ–ಕೆರೆಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರದಂಥ ರಚನಾತ್ಮಕ ಕಾರ್ಯಗಳನ್ನು ಪೂರೈಸಿದ್ದಾರೆ. ಹೆ.ಕೋ.74ನೇ ಕ್ರಿ.ಶ.1211 ಕಳ್ಳಂಬಾಳು ಸಮಸ್ತ ನಖರಂಗಳು ನುಗುನಾಡೊಳಗಿನ ಕುಂದೂರನ್ನು ಕಾಮೇಶ್ವರ ದೇವರ ನಿತ್ಯನೈವೇದ್ಯಕ್ಕೆ ದಾನಮಾಡಿರುವುದು ಕಂಡುಬರುತ್ತದೆ. ಹೆ.ಕೋ.76 ನೇ ಶಾಸನದಲ್ಲಿ ಆರಂಗೂರಿನ ಊಡೈಯಾರ್ ಹಾಗೂ ಕಳ್ಳಂಬಾಳುವಿನ ವರಗಾಣ ಚೆಟ್ಟಿಯಾರ್ ರವರ ಮಕ್ಕಳು ದೇವಾಲಯದ ಮುಂಬಾಗಿಲು ದ್ವಾರವನ್ನು

ಮಾಡಿಸಿದ್ದರೆಂದು ಉಲ್ಲೇಖಿಸುತ್ತದೆ. ಹೆ.ಕೋ.77ನೇ ಶಾಸನದಲ್ಲಿ ಕಳ್ಳಂಬಾಳು ನಗರದ ದತ್ತಲೂರ್ ಉಡೈಯಾನ್‌ಗಳಾದ ಚೆಟಿಯಾಣ್ಣಾರ್ ಮಕ್ಕಾಳಾದ ಮಶಣಾಣ್ಣಾನುಮ್ ಮತ್ತು ಪದಶಾಣ್ಡಿಯನ್ ರವರು ದೇವಾಲಯದ ಕಂಬವೊಂದನ್ನು ಮಾಡಿರುವುದನ್ನು ಉಲ್ಲೇಖಿಸುತ್ತದೆ. ಹೆ.ಕೋ.78. ಕಳ್ಳಂಬಾಳು ಶಾಸನದಲ್ಲಿ ನವಲೂರಿ ಉಡೈಯಾನ್ ಚಂಗಾದಚೆಟ್ಟಿಯ ಮಗ ಪಟ್ಟಾಣ್ಣಾನ್ ದೇವಾಲಯದ ಎರಡನೇ ಕಂಬವನ್ನು ಮಾಡಿಸಿದ್ದರ ಬಗ್ಗೆ ಉಲ್ಲೇಖಿಸುತ್ತದೆ.

ನಕರರು ಸಂತೆ, ಪೇಟೆಗಳಲ್ಲಿ ಬಂದು ವಿವಿಧ ಸರಕುಗಳನ್ನು ಖರೀದಿಸಿ, ಬಯಲು, ಅಂಗಡಿ ಹಾಗೂ ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು ಎಂದು ಹೇಳಿದೆ. ಕ್ರಿ.ಶ. 1211 ನೆಯ ಹೆ.ಕೋ.74ರ ಕಲ್ಲಾಂಬಾಳು ಶಾಸನದಲ್ಲಿ ನಕರದ ಉಲ್ಲೇಖ ಕಂಡುಬರುತ್ತದೆ. ಆದ್ದರಿಂದ ಕಳ್ಳಂಬಾಳು ಗ್ರಾಮವು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು ನಕರರು ವಾಸಿಸುತ್ತಿದ್ದ ಇಲ್ಲವೆ ವ್ಯಾಪಾರ ಮಾಡುತ್ತಿದ್ದ ಪಟ್ಟಣಗಳು ಎಂದು ಬಿ .ಆರ್ ಹೀರೆಮಠರವರು ಹೇಳಿದ್ದಾರೆ. ಹೀಗೆ ನಕರರು ಪಟ್ಟಣ ಪ್ರದೇಶಗಳಲ್ಲಿದ್ದುಕೊಂಡು ಸತತ ಪರಿಶ್ರಮ, ಪ್ರಯತ್ನಗಳ ಮೂಲಕ ವ್ಯವಹಾರ ಕಾರ್ಯಗಳಿಗೆ ಜೀವ ತುಂಬಿದರು. ಪ್ರಾಚೀನ ಮತ್ತು ಮದ್ಯಕಾಲೀನ ಪಟ್ಟಣಗಳ ಸಮಗ್ರ ಅಭಿವೃದ್ಧಿಯಲ್ಲಿ ನಕರರ ಪಾತ್ರ ಗಮನಾರ್ಹವಾಗಿದೆ. ಒಟ್ಟಿನಲ್ಲಿ ಕಳ್ಳಂಬಾಳು ನಗರವು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾದಿಸುವಲ್ಲಿ ಪ್ರಮುಖವಾದ ಪಾತ್ರವಹಿಸಿದೆ.

**ಕ್ಯಾತನಹಳ್ಳಿ**

ಹೆಗ್ಗಡದೇವನಕೋಟೆಯಿಂದ ಪೂರ್ವಕ್ಕೆ 34 ಕಿ.ಮೀ. ದೂರದಲ್ಲಿರುವ ಕ್ಯಾತನಹಳ್ಳಿಯು ಚಾರಿತ್ರಿಕ ಸ್ಥಳವಾಗಿದೆ. ಈ ಗ್ರಾಮವು ಹುಣಸೂರು ತಾಲ್ಲೂಕು ಮತ್ತು ಹೆಗ್ಗಡದೇವನಕೋಟೆ ಪ್ರದೇಶದ ಗಡಿಯಾಗಿದೆ. ಮೈಸೂರಿನಿಂದ ಗದಿಗೆಗೆ ಹೋಗುವ ದಾರಿಯಲ್ಲಿ ಕ್ಯಾತನಹಳ್ಳಿ ಕಂಡುಬರುತ್ತದೆ. ಹೊಯ್ಸಳರ ಕಾಲದಷ್ಟು ಪ್ರಾಚೀನ ಅವಶೇಷಗಳಿವೆ. ಈ ಊರನ್ನು ಬೆಳತೂರು ಮತ್ತು ಕ್ಯಾತನಹಳ್ಳಿ ಶಾಸನಗಳಲ್ಲಿ ಅರಿದವಾಳಿಕೆ ಎಂದು ಉಲ್ಲೇಖಿಸಲಾಗಿದೆ. ಪ್ರಾಚೀನ ಹೆಸರು ಅರಿದವಾಳಿಕೆಯಗಿತ್ತು ಎಂದು ತಿಳಿಯುತ್ತದೆ. ಭೌಗೋಳಿಕವಾಗಿ ಚಾಮಲಪುರ, ಹುಣಸೂರು ತಾಲ್ಲೂಕಿನ ಸಿಂಗರಮಾರನಹಳ್ಳಿ, ಹಾಲನಹಳ್ಳಿ, ಮೈಸೂರು ತಾಲ್ಲೂಕಿನ ಕಲ್ಲಹಳ್ಳಿ, ಗಂಗಡಹೊಸಹಳ್ಳಿ ಗ್ರಾಮಗಳು ಸುತ್ತುವರೆದಿವೆ. ಕೆಂಪು, ಕಪ್ಪು ಮತ್ತು ಕೆಂಪು ಮರಳುಮಿಶ್ರಿತ ಮಣ್ಣನ್ನು ಹೊಂದಿದ್ದು ಸಮತಟ್ಟದ ಬಯಲುಪ್ರದೇಶವನ್ನು ಹೊಂದಿದೆ. ಕ್ಯಾತನಹಳ್ಳಿಯಲ್ಲಿ ಮಲ್ಲೇಶ್ವರ ಬೆಟ್ಟವಿದ್ದು ದೀಪಾವಳಿ ಹಬ್ಬವಾದ ಮಾರನೆಯ ದಿವಸ ಪ್ರತಿವರ್ಷ ಜಾತ್ರೆ ಮತ್ತು ಪೂಜೆಪುರಸ್ಕಾರಗಳನ್ನು ನಡೆಸಲಾಗುತ್ತದೆ. ಮಹದೇಶ್ವರ ದೇವಾಸ್ಥಾನವು ಕ್ಯಾತನಹಳ್ಳಿಯಲ್ಲಿ ಇದ್ದು ಕಾರ್ತೀಕ ಪೂಜೆಗಳು ಮತ್ತು ಜಾತ್ರೆಯನ್ನು ನಡೆಸಲಾಗುತ್ತದೆ.

ಬೆಳತೂರಿನ ಕ್ರಿ.ಶ. 1255ರ ಹೆ.ಕೋ.88ನೆಯ ಶಾಸನದಲ್ಲಿ ಕೇತನಹಳ್ಳಿಯ ಮಲ್ಲಿಕಾರ್ಜುನನ್ನು ಬೆಳತ್ತೂರಿನ ಬಾಣೇಶ್ವರ ದೇವಾಶಲಯಕ್ಕೆ ದತ್ತಿ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ದತ್ತಿ ಬಿಟ್ಟ ವಿಷಯವನ್ನು ಕೇತಹಳ್ಳಿಯ ಭೀಮಗೌಡನ ಮಗ ಕೇತಗೌಡ, ಬೆಟ್ಟಹಳ್ಳಿಯ ಮಾಚಿದೇವನ ಮಗ ರಾಮ

ದೇವ, ಚೋಳದೇವನಮಗ ದೋಸಿದೇವ ಎಡಮಚೀದೇವನ ಮಗ ಪಂಜೀದೇವ ಬರೆಸಿದ ಶಾಸನವಾಗಿದೆ. ಇಲ್ಲಿರುವ ಕ್ರಿ.ಶ.1322ರ ಶಾಸನದಲ್ಲಿ ತಗಡೂರಿನ ಕೊವರಕೇತಗೌಡನು ಕ್ರಿ.ಶ. 1164ರಲ್ಲಿ ಅರಿದವಾಳಿಕೆಯನ್ನು ಕೇತನಹಳ್ಳಿ ಮಾಡಿ ಮಲ್ಲಿನಾಥದೇವರ ದೇವಾಲಯ ಹಾಗೂ ಹೊಸಕೆರೆಗಳನ್ನು ನಿರ್ಮಿಸಿದನು. ಅಲ್ಲದೇ ಆತನ ಮಗ ಹೊಯ್ಸಳಗೌಡನು ಲಕ್ಷೀನಾರಾಯಣ ದೇವರ ಸಹಿತ ಮಂಟಪವನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಹಾಗೂ ಚೋಳದೇವನ ಮಗ ಅಂಕಪ್ಪ, ಮಾಚಿದೇವನ ಮಗ ಚೊಕಂಣ್ಣ, ಜೀಯಗೌಡನ ಮಗ ಅಂಕಪ ಹೊಯ್ಸಗೌಂಡನು ಮಗ ದೇವಂಣ್ಣಗಳು 159 ವರ್ಷಗಳ ನಂತರ ಕ್ರಿ.ಶ. 1322ರಲ್ಲಿ ಸಮಸ್ತ ಪ್ರಭುಗಳು ಕೂಡಿ ಪುನರ್‌ಪ್ರತಿಷ್ಠೆ ಮಾಡಿಸಿ ಗದ್ದೆ ಮತ್ತು ಬೆದ್ದಲು ಭೂಮಿಯನ್ನು ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ.

ಕ್ಯಾತನಹಳ್ಳಿಯ ಪೂರ್ವಭಾಗದಲ್ಲಿ ಶ್ರೀ ಲಕ್ಷೀಕಾಂತ ದೇವಾಲಯವಿದೆ. ಇದನ್ನು ಸ್ಥಳೀಯರು ದ್ವಿಕೂಟ ದೇವಾಲಯ ಎಂದು ಕರೆಯುತ್ತಾರೆ. ದೇವಾಲಯದದ ದಕ್ಷಿಣ ಭಾಗದಲ್ಲಿ ಮಹಾದ್ವಾರವಿದೆ. ಒಂದು ಗರ್ಭಗೃಹದಲ್ಲಿ ವಿಷ್ಣುವಿನ ಮೂರ್ತಿಯನ್ನು ಪ್ರತಿಸ್ಥಾಪಿಸಲಾಗಿದೆ. ಇನ್ನೊಂದರಲ್ಲಿ ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಶಿವ ಅಥವಾ ಮಲ್ಲಿನಾಥನ ವಿಗ್ರಹಗಳಿವೆ. ಗುಡಿಯ ದಕ್ಷಿಣಕ್ಕಿರುವ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ಗಂಟೆಯಾಕಾರದಲ್ಲಿ ಕಡೆದಿರುವ ಹೊಯ್ಸಳ ಕಂಬಗಳು ಸುಂದರವಾಗಿದ್ದು, ಮಧ್ಯದಲ್ಲಿ ನೃತ್ಯ ವೇದಿಕೆಯಿದೆ. ದಕ್ಷಿಣಕ್ಕಿರುವ ಅರ್ಧಮಂಟಪದ ದ್ವಾರದಲ್ಲಿ, ದಶಾವತಾರವನ್ನು ಕೆತ್ತಲಾಗಿದೆ. ಕೆಲವು ಮಿಥುನ ಶಿಲ್ಪ ಹಾಗೂ ಭಕ್ತರ ಚಿತ್ರವನ್ನು ದ್ವಾರಬಂಧದ ಮೇಲೆ ಕೆತ್ತಲಾಗಿದೆ. ಅರ್ಧಮಂಟಪದ ಮೇಲ್ಭಾಗದ ಛಾವಣಿಯಲ್ಲಿ ಕೊಳಲು, ಡಮರುಗ, ಮೃದಂಗ ಮೊದಲಾದ ವಾದ್ಯಗಳೊಡನೆ ನೃತ್ಯ ಮಾಡುತ್ತಿರುವ ನರ್ತಕಿಯರನ್ನು ಕೆತ್ತಲಾಗಿದೆ. ಗರ್ಭಗೃಹಗಳ ಬಾಗಿಲವಾಡದ ಮೇಲೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಇನ್ನೊಂದು ಗರ್ಭಗೃಹದಲ್ಲಿ ಸಾಲಾಂಕೃತ ಕೀರ್ತಿನಾರಾಯಣ ಶಿಲ್ಪವಿದೆ. ಸಮಭಂಗಿಯಲ್ಲಿರುವ ಈ ವಿಗ್ರಹವು ಪೀಠ ಹಾಗೂ ಪ್ರಭಾವಳಿಗಳನ್ನೊಳಗೊಂಡಿದ್ದು, ಸುಮಾರು ಎರಡು ಮೀಟರ್ ಎತ್ತರವಿದೆ. ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರ ಚಿತ್ರಗಳನ್ನು ಬಿಡಿಸಲಾಗಿದೆ. ಗರ್ಭಗೃಹದೊಳಗಡೆ ಲಕ್ಷೀ, ರಾಮಾನುಜ, ನಮ್ಮಾಳ್ವಾರ್ ಹಾಗೂ ವೆಂಕಟರಮಣನ ಮೂರ್ತಿಗಳನ್ನು ಇಡಲಾಗಿದೆ. ಅರ್ಧಮಂಟಪದಲ್ಲಿ ಪೂರ್ವಕ್ಕೆ ಮುಖಮಾಡಿಕೊಂಡಿರುವ ವಿಷ್ಣುವಿನ ವಿಗ್ರಹದ ಹಿಂಬದಿಯ ಭಿತ್ತಿಯ ಎರಡೂ ಕಡೆಯಲ್ಲಿಯೂ ಸುಂದರವಾದ ಜಾಲಾಂದ್ರಗಳಿವೆ.

ಶಿವನಿರುವ ಗರ್ಭಗೃಹದ ಶಿಖರವು ಚೌಕಕಾರದ ಸ್ತೂಪಿಯಂತೆ ಕಂಡುಬರುತ್ತದೆ. ಕೀರ್ತಿ ನಾರಾಯಣನಿರುವ ಗರ್ಭಗೃಹದ ಶಿಖರವನ್ನು ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಿದ್ದು ನವೀಕರಿಸಲಾಗಿದೆ. ಗಣಪತಿ, ವಿಷ್ಣು, ವೀರಭದ್ರ, ಸೂರ್ಯ ವಿಗ್ರಹಗಳು ನವರಂಗದಲ್ಲಿವೆ. ಸ್ಥಾನಕ ಭಂಗಿಯ ವಿಷ್ಣುವಿಗ್ರಹವು ಒಂದು ಮೀಟರ್ ಎತ್ತರವಿದೆ. ಆರು ಕೈಗಳನ್ನುಳ್ಳ ಸ್ಥಾನಕ ವೀರಭದ್ರ ವಿಗ್ರಹವು 1.30 ಮೀಟರ್ ಎತ್ತರವಿದೆ. ಈ ಎಲ್ಲಾ ವಿಗ್ರಹಗಳು ಹೊಯ್ಸಳ ಶೈಲಿಯಲ್ಲಿವೆ. ಇಲ್ಲಿರುವ ಸುಮಾರು 14ನೆಯ ಶತಮಾನಕ್ಕೆ ಸೇರಿದ ಶಾಸನದಿಂದ ತಿಮ್ಮಣ್ಣನಾಯಕನ ಮನೆಯ ಅಕ್ಕಸಾಲೆ ಮಾರತಮ್ಮನು, ಮಲ್ಲಿದೇವರು ಹಾಗೂ ಲಕ್ಷ್ಮೀನಾಥ

ದೇವರ ಸೇವೆಗೆಂದೇ ಒಂದೊಂದು ಅಕ್ಕಸಾಲಿ ಕುಟುಂಬವನ್ನು ಬಿಟ್ಟ ಅಂಶವನ್ನು ತಿಳಿಸುತ್ತದೆ. ಗುಡಿಯ ಸಮೀಪದಲ್ಲೇ ಶಾಸನದಲ್ಲಿ ಉಕ್ತವಾಗಿರುವ ಕೆರೆಯೂ ಸಹ ಕಂಡುಬರುತ್ತದೆ.

**ಉಪಸಂಹಾರ**

ಹೆಗ್ಗಡದೇವನಕೋಟೆ ಪ್ರದೇಶವನ್ನು ಆಳ್ವಿಕೆಗೆ ಒಳಪಡಿಸಿಕೊಂಡ ರಾಜಮನೆತನಗಳಾದ ಪುನ್ನಾಟ ರಾಜ್ಯದ ಅರಸರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಈ ಊರಗಳನ್ನು ಆಳ್ವಿಕೆ ಮಾಡಿರುವುದನ್ನು ಗಮನಿಸಬಹುದು. ರಾಜಮಹಾರಾಜರು, ಮಹಾಮಂಡಲೇಶ್ವರರು, ಈ ಪ್ರದೇಶಗಳಲ್ಲಿ ದೇವಾಲಯಗಳು, ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ. ಕ್ಯಾತನಹಳ್ಳಿಯ ಶ್ರೀ ಲಕ್ಷ್ಮೀಕಾಂತ ದೇವಾಲಯ, ಕಳ್ಳಂಬಾಳುವಿನ ಕಾಮೇಶ್ವರ ದೇವಾಲಯ, ಕಟ್ಟೆಮನುಗನಹಳ್ಳಿಯ ದೇವಾಲಯಗಳನ್ನೂ ಸಹ ಪರಿಶಿಲಿಸಲಾಗಿದೆ. ಹೀಗೆ ಹೆಗ್ಗಡದೇವನಕೋಟೆ ಪ್ರದೇಶದ ಮೂರು ಸಾಂಸ್ಕೃತಿಕ ನೆಲೆಗಳನ್ನು ಶಾಸನ ಆಧಾರಗಳು, ಹೆಗ್ಗಡದೇವನಕೋಟೆ ತಾಲ್ಲೂಕು ಗ್ಯಾಸೆಟಿಯರ್, ಕ್ಷೇತ್ರಕಾರ್ಯದ ಮೂಲಕ ಹೆಗ್ಗಡದೇವನಕೋಟೆಯ ಕೆಲವು ಸಾಂಸ್ಕೃತಿಕ ನೆಲೆಗಳನ್ನು ಮಾತ್ರ ಕುರಿತು ಅಧ್ಯಯನ ಮಾಡಲಾಗಿದೆ.

**ಅಡಿ ಟಿಪ್ಪಣಿ**

1. ಹೆ.ಕೊ. – 47
2. ಕೊ.ಗಾ – 157
3. ಹೆ.ಕೊ. – 263,270
4. ಹೆ.ಕೊ. – 5
5. ಹೆ.ಕೊ. – 4
6. ಹೆ.ಕೊ. – 6
7. ಹೆ.ಕೊ. – 74
8. ಹೆ.ಕೊ. – 73
9. ಹೆ.ಕೊ. – 81
10. ಹೆ.ಕೊ. – 82
11. ಹೆ.ಕೊ. – 74
12. ಹೆ.ಕೊ. – 76
13. ಹೆ.ಕೊ. – 77
14. ಹೆ.ಕೊ. – 78

15. ಹೆ.ಕೊ. – 73
16. ಹೆ.ಕೊ. – 81
17. ಹೆ.ಕೊ. – 81
18. ಹೆ.ಕೊ. – 14
19. ಹೆ.ಕೊ. – 88
20. ಹೆ.ಕೊ. – 14
21. ಕ್ಷೇತ್ರಕಾರ್ಯ ವರದಿ

**ಪರಾಮರ್ಶನ ಗ್ರಂಥಗಳು**


- ನೀ.ಗಿರಿಗೌಡ. (2011). ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್, ಪರಿಶ್ರೀ ಮುದ್ರಾಣಾಲಯ, ಬೆಂಗಳೂರು.
- ಡಾ. ಹಾ. ಮಾ. ನಾಯಕ. (1974). ಎಪಿಗ್ರಾಫಿಯ ಆಫ್ ಕರ್ನಾಟಕ, ಸಂ.03, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
- ಫೆರ್ಸಿಬ್ರೌನ್, ಇಂಡಿಯಾನ್ ಆರ್ಕಿಟೆಕ್ಚರ್, ತರಪೊರೇವಲ ಸನ್ಸ್ ಅಂಡ್ ಕಂ, ಬಾಂಬೆ.
- ಸೂರ್ಯನಾಥ್ ಯು. ಕಾಮತ್. (1984). ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಪರಿಶ್ರೀ ಪ್ರಿಂಟರ್ಸ್, ಬೆಂಗಳೂರು.
- ಷ. ಶೆಟ್ಟರ್. (2007). ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, (ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) ಅಭಿನವ ಪ್ರಕಾಶನ, ಬೆಂಗಳೂರು.